2. 67.17 ಕಿ.ಮೀ. 11 ಕೆ.ವಿ. ಮಾರ್ಗದ ವಿಸ್ತರಣೆಯ ಗುರಿ ಪೈಕಿ, 4.1 ಕಿ.ಮೀ.ಗಳ ಕೆಲಸ ಮುಗಿದಿದ್ದು, 44.8 ಕಿ.ಮೀ.ಗಳ ಕೆಲಸ ಪ್ರಗತಿಯಲ್ಲಿದೆ.

3. 10.54 ಕಿ.ಮೀ. ಎಲ್.ಟಿ.ಮಾರ್ಗದ ವಿಸ್ತರಣೆಯ ಗುರಿಯ ಪೈಕಿ, 1.2. ಕಿ.ಮೀ ಗಳ ಕೆಲಸ ಪ್ರಗತಿಯಲ್ಲಿದೆ.

4) 4 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ಲೈನಿನ ನಿರ್ಮಾಣದ ಗುರಿಯನ್ನು ಈಗಾಗಲೇ ಸಾಧಿಸಿದ್ದು, ಕೆಲಸ ಪೂರ್ಣಗೊಂಡಿದೆ.

5) 9.3 ಕಿ.ಮೀ. ಗಳ ಉದ್ದದ 11 ಕೆ.ವಿ. ಮಾರ್ಗದ ಪುನರ್ವಾಹಕಗೊಳಿಸುವ ಗುರಿ ಹೊಂದಿದ್ದು, 3 ಕಿ.ಮೀ.ಗಳ ಕೆಲಸ ಮುಗಿದಿದೆ.

ಮಂಡ್ಯ ನಗರದಲ್ಲಿ ವಾಣಿಜ್ಯ ಸಂಕೀರ್ಣಗಳು

10(34) - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಾಣಿಜ್ಯ ಸಂಕೀರ್ಣಗಳಿಗೆ ಅನುಮತಿ ನೀಡಬೇಕಾಗಿದ್ದಲ್ಲ ಪಾಲಿಸಬೇಕಾದ ನಿಯಮಗಳನ್ನು ಅನುಸರಿಸಲಾಗುತ್ತಾ ಇದೆಯೇ?

ಆ) ಹಾಗಿದ್ದಲ್ಲಿ, ಅದರ ವಿವರಗಳೇನು?

ಇ) 2001-02ನೇ ಸಾಲಿನಲ್ಲಿ ಒಟ್ಟು ಪರವಾನಿಗೆ ನೀಡಿದ ವಾಣಿಜ್ಯ ಸಂಕೀರ್ಣಗಳೆಷ್ಟು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ರಾಜ್ಯ ಸಚಿವರು)

ಅ) ಹೌದು.

ಆ) ವ್ಯಾಪಕಾಭಿವೃದ್ಧಿ ಯೋಜನೆ (ಸಿ.ಡಿ.ಪಿ) ಅಡಿಯಲ್ಲಿ ವಾಣಿಜ್ಯ ವಲಯದಲ್ಲಿ ಬರುವಂತಹ ಎಲ್ಲಾ ಜಮೀನಿನಲ್ಲಿ ವಾಣಿಜ್ಯ ಕಟ್ಟಡಗಳನ್ನು ಕಟ್ಟಲು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961 ರ ಕಲಂ (14) ಮತ್ತು (15)ರ ಪ್ರಕಾರ ಅನುಮತಿ ನೀಡಲಾಗುತ್ತಿದೆ.

ಇ) 6 ವಾಣಿಜ್ಯ ಸಂಕೀರ್ಣಗಳು

ಮಂಡ್ಯ ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

11(36) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಡ್ಯ ನಗರದಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ವಿತರಣಾ ಜಾಲವನ್ನು ಬಲಪಡಿಸಿ, ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳುವ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ?